DVC. NO 01/2020

PW.1

ದಿನಾಂಕಃ 15.05.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ- ಅರ್ಜಿದಾರರ ಪರ ವಕೀಲರಾದ ಶ್ರೀ.ಎಸಿಪಿ ರವರಿಂದಃ

ನಾನು ಈ ಅರ್ಜಿಯಲ್ಲಿ ಅರ್ಜಿದಾರಳಿದ್ದು, ನನ್ನ ಮುಖ್ಯ ವಿಚಾರಣೆಯ ಬದಲಾಗಿ ನಾನು ನನ್ನ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳನ್ನು ನಾನು ನನ್ನ ವಕೀಲರಿಗೆ ಹೇಳಿ, ಬರೆಯಿಸಿ, ಓದಿಸಿ ತಿಳಿದುಕೊಂಡು ಮನಗೊಂಡ ನಂತರ ಸಹಿ ಮಾಡಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿರುವ ಎಲ್ಲಾ ವಿಷಯಗಳು ನಿಜ ಮತ್ತು ಸತ್ಯಸಂಗತಿಗಳಾಗಿರುತ್ತವೆ.

ನನ್ನ ಮದುವೆ ಆಮಂತ್ರಣ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಐದು ಪೊಟೋಗಳನ್ನು ಸಿಡಿ ಸಮೇತ ಹಾಜರು ಪಡಿಸಿದ್ದೇನೆ. ಐದು ಪೊಟೋಗಳನ್ನು ಕ್ರಮವಾಗಿ ನಿಪಿ-2 ರಿಂದ ನಿಪಿ-6 ಹಾಗೂ ಸಿಡಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

ದಿನಾಂಕ 20.09.2019 ರಂದು ಜಿಲ್ಲಾಧಿಕಾರಿಗಳು ರಾಮನಗರ ಜಿಲ್ಲೆ ರವರಿಗೆ ನೀಡಿದ ದೂರಿನ ಸ್ವೀಕೃತಿ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ದಿನಾಂಕ 11.10.2019 ರಂದು ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು ಹಾರೋಹಳ್ಳಿ ರವರಿಗೆ ನೀಡಿದ ದೂರಿನ ಸ್ವೀಕೃತಿ ಪ್ರತಿಯನ್ನು ಹಾಜರು

ಪಡಿಸಿರುತ್ತೇನೆ.(ಸದರಿ ದಾಖಲೆಯು ಕೇವಲ ಒಂದು ಪುಟ ಮಾತ್ರ ಇರುತ್ತದೆ) ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಆಲಿಸಿ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

(ರಾಧಾ ಎಸ್.)
C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ